ಕರ್ನಾಟಕ ಸರ್ಕಾರ

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

ಬೆಂಗಳೂರು

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್/ 54/2015-16 **ದಿನಾಂಕ:** 08-05-2015

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರ ಹುದ್ದೆಗಳ ನೇಮಕಾತಿ

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಇಡಿ 39 ಡಿಜಿಡಿ 2009, ಬೆಂಗಳೂರು, ದಿನಾಂಕ:29-05-2014 ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ನಿಗದಿಪಡಿಸಿದೆ. "ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು 2013ರ" ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

**ಉಪನ್ಯಾಸಕರ ಹುದ್ದೆಗಳ ನೇಮಕಾತಿಯನ್ನು ಈ ಕೆಳಕಂಡ ವಿಷಯಗಳಿಗೆ ನಡೆಸಲಾಗುವುದು.**

ಕನ್ನಡ, ಇಂಗ್ಲೀಷ್, ಹಿಂದಿ, ತೆಲುಗು, ಮರಾಠಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ಭೂಗೋಳಶಾಸ್ತ್ರ, ಹಿಂದೂಸ್ಥಾನಿ ಸಂಗೀತ, ಕರ್ನಾಟಕ ಸಂಗೀತ, ವ್ಯವಹಾರ ಅಧ್ಯಯನ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಮನ:ಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ, ಗಣಕವಿಜ್ಞಾನ, ಮತ್ತು ಶಿಕ್ಷಣ.

**ವೇತನ ಶ್ರೇಣಿ:** ರೂ.22,800-43,200

**ಒಟ್ಟು ಹುದ್ದೆಗಳು:**

ಖಾಲಿ ಇರುವ ವಿಷಯವಾರು ಹುದ್ದೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಕಾಣಬಹುದು ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿಯೂ ಸಹ ಪ್ರಕಟಿಸಲಾಗಿದೆ.

| ಕ್ರ. ಸಂ. | ವಿಷಯದ ಹೆಸರು | ಹುದ್ದೆಗಳ ಸಂಖ್ಯೆ | | | | | | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|
| | | ಉಳಿಕೆ ಮೂಲ ವೃಂದ (Residual Parent cadre) | ಗ್ರೂಪ್ – ಸಿ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ಸಂಖ್ಯೆ | ಒಟ್ಟು | ರಾಜ್ಯವ್ಯಾಪಿ ಸ್ಥಳೀಯ ವೃಂದ* | ಗ್ರೂಪ್ – ಸಿ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ಸಂಖ್ಯೆ | ಒಟ್ಟು | |
| 1 | ಕನ್ನಡ | 106 | 2 | 108 | 45 | 1 | 46 | 154 |
| 2 | ಇಂಗ್ಲೀಷ್ | 48 | 2 | 50 | 63 | 1 | 64 | 114 |
| 3 | ಹಿಂದಿ | 7 | – | 7 | 13 | – | 13 | 20 |
| 4 | ತೆಲುಗು | – | – | – | 1 | – | 1 | 1 |
| 5 | ಮರಾಠಿ | 3 | – | 3 | 2 | – | 2 | 5 |
| 6 | ಉರ್ದು | 7 | – | 7 | 8 | – | 8 | 15 |
| 7 | ಸಂಸ್ಕೃತ | 9 | – | 9 | 1 | – | 1 | 10 |
| 8 | ಇತಿಹಾಸ | 48 | 2 | 50 | 57 | 1 | 58 | 108 |
| 9 | ಅರ್ಥಶಾಸ್ತ್ರ | 23 | 2 | 25 | 74 | 1 | 75 | 100 |
| 10 | ತರ್ಕಶಾಸ್ತ್ರ | 1 | – | 1 | – | – | – | 1 |
| 11 | ಭೂಗೋಳ ಶಾಸ್ತ್ರ | 44 | – | 44 | 2 | – | 2 | 46 |
| 12 | ಹಿಂದೂಸ್ಥಾನಿ ಸಂಗೀತ | – | – | – | 1 | – | 1 | 1 |
| 13 | ಕರ್ನಾಟಕ ಸಂಗೀತ | – | – | – | 1 | – | 1 | 1 |

| | | | | | | | | |
|---|---|---|---|---|---|---|---|---|
| 14 | ವ್ಯವಹಾರ ಅಧ್ಯಯನ ಶಾಸ್ತ್ರ | 47 | 1 | 48 | 63 | – | 63 | 111 |
| 15 | ಸಮಾಜಶಾಸ್ತ್ರ | 52 | 1 | 53 | 62 | 1 | 63 | 116 |
| 16 | ರಾಜ್ಯಶಾಸ್ತ್ರ | 41 | 1 | 42 | 64 | 1 | 64 | 106 |
| 17 | ಸಂಖ್ಯಾಶಾಸ್ತ್ರ | 1 | – | 1 | – | – | – | 1 |
| 18 | ಮನಃಶಾಸ್ತ್ರ | 1 | – | 1 | – | – | – | 1 |
| 19 | ಭೌತಶಾಸ್ತ್ರ | 25 | – | 25 | 13 | – | 13 | 38 |
| 20 | ರಸಾಯನಶಾಸ್ತ್ರ | 10 | – | 10 | 20 | – | 20 | 30 |
| 21 | ಗಣಿತಶಾಸ್ತ್ರ | 55 | 1 | 56 | 09 | – | 09 | 65 |
| 22 | ಜೀವಶಾಸ್ತ್ರ | 35 | – | 35 | 20 | – | 20 | 55 |
| 23 | ಗಣಕ ವಿಜ್ಞಾನ | 4 | – | 4 | – | – | – | 4 |
| 24 | ಶಿಕ್ಷಣ | 27 | – | 27 | – | – | – | 27 |
| | ಒಟ್ಟು | 594 | 12 | 606 | 519 | 6 | 524 | 1130 |

* ರಾಜ್ಯ ವ್ಯಾಪಿ ಸ್ಥಳೀಯ ವೃಂದವು ಹೈ-ಕ ಪ್ರದೇಶ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಒಳಗೊಂಡಿರುತ್ತವೆ

**ಬ್ಯಾಕ್‌ಲಾಗ್ ಹುದ್ದೆಗಳ ಹಂಚಿಕೆ ವಿವರ:**

| ಕ್ರ. ಸಂ. | ವಿಷಯದ ಹೆಸರು | ಹುದ್ದೆಗಳ ಸಂಖ್ಯೆ | |
|---|---|---|---|
| | | ಉಳಿಕೆ ಮೂಲ ವೃಂದ | ಒಟ್ಟು |
| 01 | ಉರ್ದು | 1 | 1 |
| | ಒಟ್ಟು | 1 | 1 |

ಟಿಪ್ಪಣಿ:- ಮೇಲೆ ತಿಳಿಸಿರುವ ತಾತ್ಕಾಲಿಕ ಹುದ್ದೆಗಳ ಸಂಖ್ಯೆ ಮತ್ತು ಮೀಸಲಾತಿ ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

## 1. ವಯೋಮಿತಿ:

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಟ 21 ವರ್ಷಗಳು ತುಂಬಿರತಕ್ಕದ್ದು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

1) ಸಾಮಾನ್ಯ ಅರ್ಹತೆ – 40 ವರ್ಷಗಳು
2) ಪ್ರವರ್ಗ-2ಎ/2ಬಿ/3ಎ/3ಬಿ – 43 ವರ್ಷಗಳು
3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 – 45 ವರ್ಷಗಳು.

ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಮಾಜಿ ಸೈನಿಕರು, ಈಗಾಗಲೇ ಸರ್ಕಾರಿ ಸೇವೆಯಲ್ಲಿ ಇರುವ ಅಭ್ಯರ್ಥಿಗಳು, ವಿಧವೆಯರು ವರ್ಗದ ಅಭ್ಯರ್ಥಿಗಳಿಗೆ ಐದು ವರ್ಷಗಳಷ್ಟು ಹೆಚ್ಚಿಸಲಾಗುವುದು. ವಿಕಲಚೇತನ ಅಭ್ಯರ್ಥಿಗಳಿಗೆ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅಧಿನಿಯಮ (3)ರ ನಿಯಮ 6ರಲ್ಲಿ ನಿಗಧಿಪಡಿಸಿರುವಂತೆ ಹತ್ತು ವರ್ಷಗಳಷ್ಟು ವಯೋಮಿತಿಯನ್ನು ಹೆಚ್ಚಿಸಲಾಗುವುದು.

## 2. ಶೈಕ್ಷಣಿಕ ವಿದ್ಯಾರ್ಹತೆ:

ಎ. ಅಭ್ಯರ್ಥಿಯು ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಒಟ್ಟಾರೆ ಕನಿಷ್ಠ ಶೇಕಡ 55ರಷ್ಟು ಅಂಕಗಳನ್ನು ಅಥವಾ ತತ್ಸಮಾನ ಶ್ರೇಣಿಯನ್ನು ಪಡೆದು ತೇರ್ಗಡೆ ಹೊಂದಿರಬೇಕು.

ಬಿ. ಅಭ್ಯರ್ಥಿಯು ಬಿ.ಇಡಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

1. **Details of Subjects and their Equivalent Qualification to claim eligibility for the post of Lecturers in the respective subjects:**

| SL. No. | Subject | Equivalent Qualification |
|---|---|---|
| 1 | Kannada | Second class Master's Degree with minimum 55% of marks in:- Kannada or Kannada Language Literature or Kannada and Janapada or Janapada Sahitya, Kannada Sahitya and Shasana Shastra, Kannada Sahitya & Bhasha Shastra, Kannada Sahitya Bhashanthara & Taulanika Adhyayana. |
| 2 | English | Second class Master's Degree with minimum 55% of marks in English |
| 3 | Hindi | Second class Master's Degree with minimum 55% of marks in: Hindi |
| 4 | Urdu | Second class Master's Degree with minimum 55% of marks in: Urdu or Persian |
| 5 | Telugu | Second class Master's Degree with minimum 55% of marks in: Telugu |
| 6 | Marathi | Second class Master's Degree with minimum 55% of marks in: Marathi |
| 7 | Sanskrit | Second class Master's Degree with minimum 55% of marks in: Sanskrit or Vidwath Uttam |
| 8 | History | Second class Master's Degree with minimum 55% of marks in History or Ancient History & Archaeology, Ancient Indian History & Epigraphy |
| 9 | Economics | Second class Master's Degree with minimum 55% of marks in Economics |
| 10 | Political Science | Second class Master's Degree with minimum 55% of marks in: Political Science |
| 11 | Sociology | Second class Master's Degree with minimum 55% of marks in: Sociology or Social Work or Anthropology |
| 12 | Geography | Second class Master's Degree with minimum 55% of marks in: Geography or Applied Geography |
| 10 | Psychology | Second class Master's Degree with minimum 55% of marks in: Psychology |
| 11 | Business Studies | Second class Master's Degree with minimum 55% of marks in: Commerce |
| 12 | Physics | Second class Master's Degree with minimum 55% of marks in: Physics |
| 13 | Chemistry | Second class Master's Degree with minimum 55% of marks in: Chemistry or Physical Chemistry or Organic Chemistry or Inorganic Chemistry or Analytical Chemistry or Industrial Chemistry or Bio Chemistry or Applied Chemistry or Pharmaceutical Chemistry or Medicinal Chemistry or the candidates that have completed the five year Integrated M.Sc., Course in Chemistry or Applied Chemistry shall also be considered |
| 14 | Mathematics | Second class Master's Degree with minimum 55% of marks in: Mathematics or Applied Mathematics |
| 15 | Biology | Second class Master's Degree with minimum 55% of marks in: Botany or Zoology or Life Science or Bio Science or Applied Botany or Applied Zoology |
| 16 | Electronics | Second class Master's Degree with minimum 55% of marks in: Electronic Science or Physics with Electronics Specialization or M Tech/ME Electronics and Communication, Electrical and Electronics |
| 17 | Computer Science | Second class Master's Degree with minimum 55% of marks in: MCA, M.Sc (Comp.Sc), M. Tech/ME in Computer Science/Information Science and Engineering.<br>Second class Bachelor's Degree with minimum 55% of marks in: BE Computer Science, BE-Information Science. |
| 18 | Statistics | Second class Master's Degree with minimum 55% of marks in: MA/MSc in Statistics |
| 19 | Logic | Second class Master's Degree with minimum 55% of marks in: Philosophy |
| 20 | Education | Second class Master's Degree with minimum 55% of marks in: M.Ed or 2 years MA(Education) |
| 21 | Hindustani Music | Second class Master's Degree with minimum 55% of marks in: MA in music or Karnataka Music Vidwat/Proficiency or Hindustani Music Vidwat / Proficiency |
| 22 | Karnataka Music | Second class Master's Degree with minimum 55% of marks in: MA in music or Karnataka Music Vidwat/Proficiency or Hindustani Music Vidwat / Proficiency |

The candidates who do not possess the above mentioned qualification will not be eligible for the post of Lecturers in the respective subjects.

ಅರ್ಹತಾ ನಿಬಂಧನೆಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ನಲ್ಲಿ ಹಾಗೂ ಕರ್ನಾಟಕ ರಾಜ್ಯಪತ್ರ (ಗೆಜೆಟ್) ದಲ್ಲಿ ಪ್ರಕಟಿಸಲಾಗುವುದು

2. **Eligibility Conditions**

a. Candidate should be a Citizen of India.

b. The male candidate who has more than one wife living and female candidate who has married a man already having another wife are not eligible for recruitment unless they have obtained prior permission from the Government.

c. The candidate must be physically and mentally fit and they should be able to discharge their duties confidently for the post to which they will be selected.

d. The candidate who attempts to obtain extraneous support by any means for his candidature from officials or non-officials are not eligible for appointment to the posts specified in this recruitment.

e. The candidate who is or has been convicted of an offence involving moral turpitude or who is or has been temporarily debarred or disqualified by the Union or any State Public Service Commission from appearing for examinations or selections conducted by it shall ordinarily be appointed to the State Civil Services are not eligible to the posts specified in this recruitment, unless the Government after a review of all the circumstances consider him suitable for such appointment.

f. The candidate

I. who is or has been a member of, or has associated himself or herself with, any body or association after such body or association is declared as an unlawful body or association; or

II. has participated in or is associated with, any activity or programme,-

i. aimed at subversion of the Constitution of India;

ii. aimed at organised breach or defiance of law involving violence;

iii. which is prejudicial to the interests of the sovereignty and integrity of India or the Security of the State; or

iv. which promotes, on grounds of religion, race, language, caste or community, feelings of enmity or hatred between different sections of the people; or

v. is dismissed from service under the Government of India or any State Government; or

vi. is or has been permanently debarred or disqualified by the Union or any State Public Service Commission from appearing for any examinations or selections conducted by it,

are not eligible to the posts specified in this recruitment.

**Further**, A candidate found guilty of impersonation or of submitting fabricated documents or documents which have been tampered with or of making statements which are incorrect or false or of suppressing material information or of using or attempting to use unfair means in an examination conducted for purposes of recruitment of otherwise resorting to any other irregular or improper means in connection with his recruitment may, in addition to rendering himself liable to a criminal prosecution and to disciplinary action be debarred either permanently or for a special period,-

(A) By the commission or other recruiting or examining authority from admission to any examination or appearing for interview for selection of candidates; and

(B) By the Government from employment under it.

೩. ಸ್ಪರ್ಧಾತ್ಮಕ ಪರೀಕ್ಷೆ ಪ್ರಶ್ನೆಪತ್ರಿಕೆಗಳು:

ಎಲ್ಲಾ ಅರ್ಹ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲೇಬೇಕು.

I. ಕಡ್ಡಾಯ ಪ್ರಶ್ನೆಪತ್ರಿಕೆಗಳು:-

a. ಪ್ರಶ್ನೆಪತ್ರಿಕೆ – I : ಕನ್ನಡ 150 ಅಂಕಗಳು – 3 ಗಂಟೆಗಳ ಅವಧಿ
(ಎಸ್.ಎಸ್.ಎಲ್.ಸಿ ಮಟ್ಟದಲ್ಲಿ ಕನ್ನಡ ಪ್ರಥಮ ಭಾಷೆಗೆ ಸಮಾನವಾದ)

b. ಪ್ರಶ್ನೆಪತ್ರಿಕೆ – II ಐಚ್ಛಿಕ ವಿಷಯದ ಪ್ರಶ್ನೆಪತ್ರಿಕೆ I ಮತ್ತು II ತಲಾ 150 ಅಂಕಗಳು – ಪ್ರತಿ ಪತ್ರಿಕೆಗೆ 3 ಗಂಟೆಗಳ ಕಾಲಾವಧಿಯದ್ದಾಗಿರುತ್ತದೆ.

- ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಅಭ್ಯರ್ಥಿಯಿಂದ ನಿರೀಕ್ಷಿಸಬಹುದಾದ ಜ್ಞಾನವನ್ನು ಪರೀಕ್ಷಿಸುವ ರೀತಿಯ ಪ್ರಶ್ನೆಗಳು – multiple choice ಕನ್ನಡ ಅಥವಾ ಇಂಗ್ಲೀಷಿನಲ್ಲಿ. ಪತ್ರಿಕೆಯ ಮೌಲ್ಯಮಾಪನವು ನಕಾರಾತ್ಮಕ ಮೌಲ್ಯಮಾಪನ (Negative Valuation) ಮಾದರಿಯದ್ದಾಗಿರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಳೆಯಲಾಗುತ್ತದೆ. ಈ ನಿರ್ದಿಷ್ಟ ಪತ್ರಿಕೆಗಳಲ್ಲಿ ಕನಿಷ್ಠ ಅಂಕದ ಮಿತಿ ಇರುವುದಿಲ್ಲ. ಆದರೆ, ಎಲ್ಲಾ ಅಭ್ಯರ್ಥಿಗಳು ಕನ್ನಡ ಮತ್ತು ಇತರ ನಿರ್ದಿಷ್ಟ ಪತ್ರಿಕೆಗಳ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ.

- ಸ್ನಾತಕೋತ್ತರ ಪದವಿಯಲ್ಲಿ ಪಡೆದಿರುವ ಅಂಕಗಳನ್ನು ಹುದ್ದೆಯ ಆಯ್ಕೆಗಾಗಿ ಪರಿಗಣಿಸಲಾಗುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು.

<u>ಪಠ್ಯಕ್ರಮ:</u>

ಪ್ರಶ್ನೆಪತ್ರಿಕೆ (ಐಚ್ಛಿಕ ವಿಷಯಗಳು) ಕುರಿತಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ರಚಿಸಿರುವ ವಿಷಯ ತಜ್ಞರ ಸಮಿತಿಯು ವಿನ್ಯಾಸಗೊಳಿಸಿರುವ ವಿಷಯವಾರು ಪಠ್ಯಕ್ರಮ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

<u>ಸೂಚನೆ:</u>

1) Iನೇ ಕಡ್ಡಾಯ ಪ್ರಶ್ನೆಪತ್ರಿಕೆ ಅರ್ಹತಾ ಪರೀಕ್ಷೆಯಾಗಿದ್ದು ಕನಿಷ್ಠ ೫೦ ಅಂಕಗಳನ್ನು ಗಳಿಸಿದವರು ಮಾತ್ರ ಅರ್ಹತೆಗಳಿಸುತ್ತಾರೆ. ಆದರೆ, ಈ ಕಡ್ಡಾಯ ಪರೀಕ್ಷೆಗಳ ಅಂಕವನ್ನು ಆಯ್ಕೆಯ ಮೆರಿಟ್ ಪಟ್ಟಿ ನಿರ್ಧಾರಕ್ಕೆ ಪರಿಗಣಿಸುವುದಿಲ್ಲ. ಕನ್ನಡ ಕಡ್ಡಾಯ ಪ್ರಶ್ನೆಪತ್ರಿಕೆ ಮಟ್ಟವು ಎಸ್.ಎಸ್.ಎಲ್.ಸಿ.ಯಲ್ಲಿನ ಪ್ರಥಮ ಭಾಷೆ ಕನ್ನಡಕ್ಕೆ ಸಮಾನವಾಗಿರುತ್ತದೆ.
2) **ಪ್ರಶ್ನೆ ಪತ್ರಿಕೆ** ii ಸ್ನಾತಕೋತ್ತರ ಮಟ್ಟದ್ದಾಗಿರುತ್ತದೆ.
3) ನಿಯಮಾನುಸಾರ ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಇವರು ಸಹಾಯವನ್ನು ನೀಡುವ ಬಗ್ಗೆ <u>ಪರೀಕ್ಷೆಯ ಮುನ್ನ</u> ಕ್ರಮ ಕೈಗೊಳ್ಳುವರು. ಈ ಸೌಲಭ್ಯವು ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಕೋರಿದ್ದಲ್ಲಿ ಮಾತ್ರ ನೀಡಲಾಗುವುದು. ಅಂತಹ ಅಭ್ಯರ್ಥಿಗಳು ಪರೀಕ್ಷಾ ದಿನದಂದು ವಿಕಲಚೇತನ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಲ್ಲಿಸುವುದು.

5. **ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಉಪನ್ಯಾಸಕರ ಹುದ್ದೆಗಳಿಗೆ ಆಯಾ ವಿಷಯಗಳಿಗೆ ಅಗತ್ಯ ಅರ್ಹತೆ ಕುರಿತ ವಿಷಯವಾರು ವಿವರ, ಸಮಾನಾಂತರ ಶಿಕ್ಷಣ ಅರ್ಹತೆ, ವಿವರಗಳನ್ನು ಕೆಇಎ ವೆಬ್‌ಸೈಟ್** http://kea.kar.nic.in **ನಲ್ಲಿ ಹಾಗೂ ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.**

6. <u>ಅರ್ಜಿ ಸಲ್ಲಿಸುವ ವಿಧಾನ</u>:

ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ತೋರಿಸಿರುವ **Lecturers Recruitment** ಲಿಂಕ್ ಅನ್ನು ಆಯ್ಕೆ ಮಾಡಿ ಅರ್ಜಿಯನ್ನು "ಆನ್‌ಲೈನ್" ಮುಖಾಂತರ ಭರ್ತಿಮಾಡಬೇಕು. ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ವಿವರವಾದ ಮಾಹಿತಿಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.

7. <u>**ಶುಲ್ಕ:**</u>

ಸ್ಪರ್ಧಾತ್ಮಕ ಪರೀಕ್ಷೆಯ ಶುಲ್ಕದ ವಿವರಗಳು ಈ ಕೆಳಗಿನಂತಿದೆ.

| ವಿವರಗಳು | ಶುಲ್ಕ | |
|---|---|---|
| ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು | ರೂ. 2500/- | ಹಿಂದಿರುಗಿಸಲಾಗುವುದಿಲ್ಲ |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ | ರೂ. 2000/- | |
| ವಿಕಲಚೇತನರಿಗೆ | ಶುಲ್ಕ ವಿನಾಯಿತಿ ಇದೆ. | |

<u>**ಸೂಚನೆ:**</u>

1) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು ಶುಲ್ಕದೊಂದಿಗೆ (ಅನ್ವಯಿಸಿದ್ದಲ್ಲಿ) ಸಲ್ಲಿಸತಕ್ಕದ್ದು.
2) ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು.

8. **ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿಯನ್ನು ಕೆಇಎ ವೆಬ್‌ಸೈಟ್ <u>http://kea.kar.nic.in</u> ನಲ್ಲಿ ನಂತರ ಪ್ರಕಟಿಸಲಾಗುತ್ತದೆ.**

9. <u>**ಪರೀಕ್ಷಾ ಕೇಂದ್ರಗಳು:**</u>

**ಪರೀಕ್ಷೆಯನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.**

10. **ಆಯ್ಕೆ ವಿಧಾನ ಮತ್ತು ನೇಮಕಾತಿ– ವಿವರಗಳನ್ನು ಕೆಇಎ ವೆಬ್‌ಸೈಟ್** <u>http://kea.kar.nic.in</u> ನಲ್ಲಿ ಪ್ರಕಟಿಸಲಾಗುತ್ತದೆ. **ದಿನಾಂಕ:16-05-2015 ರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.**

<u>ಸೂಚನೆ:</u>

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ನಡತೆ) ನಿಯಮ 1966 ಮತ್ತು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ಪ್ರೊಬೇಷನ್) ನಿಯಮ 1977 ಮತ್ತು ಸರ್ಕಾರಿ ನೌಕರರ ಸೇವಾ ನಿಬಂಧನೆಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ನಿಯಮ, 1978 (1999ರ ಕರ್ನಾಟಕ ನಿಯಮ 14) ಅಡಿಯಲ್ಲಿ ಕಾಲಕಾಲಕ್ಕೆ ಜಾರಿಗೆ ಬಂದಿರುವ ಬಳಕೆಯಲ್ಲಿರುವ ಎಲ್ಲಾ ಕಾಯಿದೆಗಳು ನಿಯಮಗಳ ಆಶಯಕ್ಕೆ ಅನುಗುಣವಾಗಿಲ್ಲದಿದ್ದಲ್ಲಿ ಅವುಗಳನ್ನು ಹೊರತುಪಡಿಸಿ ಈ ಆಯ್ಕೆಗೆ ಮತ್ತು ಈ ನಿಯಮಗಳಡಿ ಆಯ್ಕೆಗೊಳ್ಳುವ ಅಭ್ಯರ್ಥಿಗಳಿಗೆ ಅನ್ವಯವಾಗುತ್ತವೆ.

ಕರ್ನಾಟಕ ಸಾಮಾನ್ಯ ಸೇವಾ (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು, 2013 ನಲ್ಲಿ ಪರಿಭಾಷಿಸಿಲ್ಲದೆಯೂ ಬಳಕೆ ಮಾಡುತ್ತಿರುವ ಶಬ್ದಗಳು ಮತ್ತು ಅಭಿವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ನಾಗರೀಕ ಸೇವೆ ಹಾಗೂ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿರುವಂತೆ ಅರ್ಥೈಸಬೇಕು.

Sgodbole

(ಸುಷಮಾ ಗೋಡಬೋಲೆ ಭಾ.ಆ.ಸೇ.,)
ಕಾರ್ಯನಿರ್ವಾಹಕ ನಿರ್ದೇಶಕರು

## (FORMATS)

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ:19–11–2005

### CERTIFICATE FOR THE PERSONS WITH DISABILITIES

This is to certify that Sri/Smt/Kum ---------------------------------------------------------------- Son/wife/Daughter of Shri ------------------------------------Age ----------------------------old, male/female, Registration No-----------------------------------------------is a case of ------------------------------------------ --------------------------------He/She is physically disabled/visual disabled /speech & hearing disabled and has ------------------------------%-----------------------------------percent ) permanent physical impairment/visual impairment speech & hearing impairment) in relation to his/her--------------------------- -------------------

Note:-

1. This condition is progressive / non progressive likely to improve / not likely to improve.
2. Re-assessment is not recommended / is recommended after a period of ----------------------months / years.

   - Strike out which is not applicable

| | | | |
|---|---|---|---|
| Recent Photograph showing Disability affixed here) | Sd/- Doctor (Seal) | Sd/- Doctor (Seal) | Sd/- Doctor (Seal) |

Countersigned by the
Medical Superintendent CMO/ Head of
Hospital (with seal)

Signature /Thumb impression
of the disabled person

Explanation :-

1) Blindness refers to a condition where a person suffers from any of the following conditions namely:- (a) Total absence of sight; of (b) Visual acuity not exceeding 6/60 or 20/200 (Snellen) in the better eye with correcting lenses; or (c) limitation of the field of vision subtending an angle of 20 degree or worse;

2)Person with Low vision means a person with impairment of visual functioning even after treatment or standard refractive correction, but who uses or is potentially capable of using vision for the planning or execution of a task with appropriate assistive device;

3)"Hearing impairment" mean's loss of sixty decibels or more in the better ear in the conversational range of frequencies.

4)"Locomotor disability" means disability of the bones, joints or muscles leading to substantial restriction of the movement of the limbs or any form of cerebral palsy.

(ಪ.ಜಾ/ಪ.ಪಂಕ್ತಿ ಸರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ-ಡಿ

(ನಿಯಮ 3ಎ (2) (3) ನ್ನು ನೋಡಿ)

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ ಪ್ರಮಾಣ ಪತ್ರ

-------------------- ರಾಜ್ಯದ / ಕೇಂದ್ರಾಡಳಿತ ಪ್ರದೇಶದ *----------------ಜಿಲ್ಲೆಯ/ವಿಭಾಗದ--------------

ಗ್ರಾಮ/ಪಟ್ಟಣದ * ನಿವಾಸಿಯಾದ ಶ್ರೀ/ಶ್ರೀಮತಿ-------------------------ಎಂಬುವವರ ಮಗ/ಮಗಳಾದ ಶ್ರೀ/ಶ್ರೀಮತಿ ------

--------------------ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾಡಲಾಗಿರುವ ಜಾತಿ/ ಬುಡಕಟ್ಟಿಗೆ

* ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951
(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಅದೇಶ 1956, ಮುಂಬಯಿ ರಾಜ್ಯ, ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971 ರ ಮೂಲಕ ತಿದ್ದುಪಡಿಯಾದಂತೆ)
ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976 ರ ಮೂಲಕ ತಿದ್ದುಪಡಿಯಾದಂತೆ
ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959
ಸಂವಿಧಾನ (ದಾದರ್ ಮತ್ತು ನಗರ ವೇಲಿ) ಅನುಸೂಚಿತ ಜಾತಿಗಳ ಆದೇಶ, 1962
ಸಂವಿಧಾನ (ಪಾಂಡಿಚೆರಿ) ಅನುಸೂಚಿತ ಜಾತಿಗಳ ಆದೇಶ, 1962
ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಅದೇಶ, 1967
ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಅದೇಶ, 1988
ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಅದೇಶ

2. ಶ್ರೀ/ಶ್ರೀಮತಿ/ಕುಮಾರಿ *----------------------------ಮತ್ತು/ಅಥವಾ ಅವನ*/ಅವಳ* ಕುಟುಂಬವು ------------ ರಾಜ್ಯ / ಕೇಂದ್ರಾಡಳಿತ ಪ್ರದೇಶದ --------------ಜಿಲ್ಲಾ /ವಿಭಾಗದ*-----------------ಗ್ರಾಮ/----------ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ:-----------

ತಹಸೀಲ್ದಾರ್-----------------

ಸ್ಥಳ:
ದಿನಾಂಕ:

ಪದನಾಮ
ಕಛೇರಿಯ ಮೊಹರಿನೊಂದಿಗೆ
ರಾಜ್ಯ/ಕೇಂದ್ರಾಡಳಿತ ಪ್ರದೇಶ

*ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ/ಒಡೆದು ಹಾಕಿ

ಸೂಚನೆ:-

ಇಲ್ಲಿ ಉಪಯೋಗಿಸಿದ "ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯ ಪ್ರಜಾ ಪ್ರಾತಿನಿಧ್ಯ ಅಧಿನಯಮ, 1950 ರ 20ನೇ ಪ್ರಕಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸಕಾರದ ಪತ್ರ ಸಂಖ್ಯೆ:ಬಿಸಿ 12028/2/78 ಎಸ್‌ಸಿಟಿ -1 ಗೃಹಮಂತ್ರಾಲಯದ ಅನುಸಾರವಾಗಿ ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ:13-2-74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ 5ನೇ ಆಗಷ್ಟ್ 1975 ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಯ ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

(ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ-ಇ

(ನಿಯಮ 3ಎ (2)(3) ನ್ನು ನೋಡಿ)

ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ

-------------------ಗ್ರಾಮ/ಪಟ್ಟಣ/ನಗರದ ನಿವಾಸಿಯಾದ ಶ್ರೀ / ಶ್ರೀಮತಿ -------------ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ -------------------------ಇವರು ಹಿಂದುಳಿದ ವರ್ಗಗಳ (ಪ್ರವರ್ಗ)------- -------------------ಜಾತಿಯ---------------------------------ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ತಹಸೀಲ್ದಾರರು
------------ತಾಲ್ಲೂಕು
ಕಚೇರಿಯ ಮೊಹರು

---

(ಪ್ರವರ್ಗ-2ಎ,2ಬಿ3ಎ,3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ-ಎಫ್

(ನಿಯಮ 3ಎ (2) (3) ನ್ನು ನೀಡಿ)

ಪ್ರವರ್ಗ-1ರ ಹೊರತಾಗಿ, ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಅದಾಯ ಮತ್ತು ಜಾತಿ ಪ್ರಮಾಣ ಪತ್ರ

-------------ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ---------------------ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀತಿ/ಕುಮಾರಿ-----------------ಇವರು ಮತ್ತು ಆತನ/ಆವಳ ತಂದೆ/ತಾಯಿ/[ಫಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ:30-3-2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು:

ಅಭ್ಯರ್ಥಿಯಾಗಲಿ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕರಾಗಲಿ /ಪತ್ನಿ/ಪತಿಯಾಗಲಿ ಸರ್ಕಾರದ ಸೇವೆಯಲ್ಲಿ ಗ್ರೂಪ್-ಎ ಅವಾ ಗ್ರೂಪ್-ಬಿ ಅಧಿಕಾರಿಯಾಗಿಲ್ಲವೆಂದು:

ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನದ ಹುದ್ದೆಯನ್ನು ಹೊಂದಿರುವುದಿಲ್ಲ:

ಅಥವಾ

ಖಾಸಗಿ ಕೈಗಾರಿಕೆ/ಸಂಸ್ಥೆಯಲ್ಲಿ ಗ್ರೂಪ್-ಬಿ ಅಧಿಕಾರಿಯ ವೇತನ ಶ್ರೇಣಿ ರೂ.6000-11200/- ಕಡಿಮೆಯಿಲ್ಲದೆ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು:

ಅಥವಾ

ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ಪತಿಯ ವಾರ್ಷಿಕ ನಿವ್ವಳ ಆದಾಯವೂ ಎರಡು ಲಕ್ಷ ಮೀರಿರುವುದಿಲ್ಲವೆಂದು:

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ/ಆಕೆಯ ತಾಯಿ/ಪೋಷಕರು/ಪತ್ನಿ/ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕ/ಪತ್ನಿ/ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 20 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಷನ್ ಭೂಮಿಯನ್ನು ಹೊಂದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ30-3-2002 ರ ಅನ್ವಯ ಶ್ರೀ/ಶ್ರೀಮತಿ/ಕುಮಾರಿ ---------- ಇವರು-----------ಜಾತಿಗೆ -------------ಸೇರಿದ ಉಪ ಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ:30-1-2002 ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ ------------(2ಎ,2ಬಿ3ಎ,3ಬಿ) ಸೇರಿರುತ್ತಾರೆ.

## ನಮೂನೆ-1

**ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಡೀಕರಿಸ್ಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ (ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)**

ವರಿಗೆ:
ತಹಸೀಲ್ದಾರರು
------------ತಾಲ್ಲೂಕು
----------- ಜಿಲ್ಲೆ

ಮಾನ್ಯರೇ,

ಶ್ರೀ/ಶ್ರೀಮತಿ -----------------ಎಂಬುವವರ ಮಗ/ಮಗಳು/ಪತಿ/ಪತ್ನಿ -------- ಆದ ನಾನು ಮೇಲುಸ್ತರದಲ್ಲಿ (creamy layer) ಬರುವುದಿಲ್ಲವೆಂದು ನೇರ ನೇಮಕಾತಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ:
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ:
   ತಾಲ್ಲೂಕು:
   ಜಿಲ್ಲೆ :
3. ಅಭ್ಯರ್ಥಿಯ ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ:
1. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯ/ ಪತ್ನಿಯ ಹೆಸರು ಮತ್ತು ಉದ್ಯೋಗ:
   (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ)
2. ಅಭ್ಯರ್ಥಿಯ ಪ್ರಸ್ತುತ ವಿಳಾಸ
3. ಅಭ್ಯರ್ಥಿಯ ಖಾಯಂ ವಿಳಾಸ
4. ಅಭ್ಯರ್ಥಿಯ ಶಾಲಾ ಶಿಕ್ಷಣ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ
   ಮಾಧ್ಯಮಿಕ
   ಪ್ರೌಢ
5. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ
   ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ) ಇವರ
   ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ:
   ಅ. ವೇತನ ಶ್ರೇಣಿ
   ಆ. ಜಮೀನಿನ ವಿವರ
   ಇ. ಇತರ ಮೂಲಗಳು
6. ಆದಾಯ ತೆರಿಗೆ ಪಾವತಿದಾರರೇ?
7. ಸಂಪತ್ತು ತೆರಿಗೆ ಪಾವತಿದಾರರೇ?
8. ಮಾರಾಟ ತೆರಿಗೆ ಪಾವತಿದಾರರೇ?

## ಪ್ರಮಾಣೀಕೃತ ಘೋಷಣೆ

ಮೇಲೆ ನನ್ನಿಂದ ಒದಗಿಸಿದ ಮಾಹಿತಿ/ ವಿವರಣೆಯ ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಧೇಯ

ಸ್ಥಳ:
ದಿನಾಂಕ:

(ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ
(ತಂದೆ/ತಾಯಿ ಜೀವಂತವಿಲ್ಲದಿದ್ದರೆ)
ಹೆಂಡತಿ/ಗಂಡ/ಇವರ ಸಹಿ)

ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರದದನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ: 1)

(ಪೂರ್ಣ ವಿಳಾಸದೊಂದಿಗೆ) 2)

## ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ------------------ಎಂಬುವವರ ಮಗ/ಮಗಳು /ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ --------- ಎಂಬುವವರು ಕರ್ನಾಟಕ ರಾಜ್ಯದ --------------------- ಜಿಲ್ಲೆಯ ವಿಭಾಗ ----------------------- ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.
2. ಶ್ರೀ/ಶ್ರೀಮತಿ ಕುಮಾರಿ-------------------- ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ /251/ ಬಿಸಿಎ 94 ಬೆಂಗಳೂರು, ದಿನಾಂಕ:31-01-1995 ರನ್ವಯ ಜನರಲ್ ವರ್ಗದ ಮೇಲುಸ್ತರದಲ್ಲಿ (Creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ತಹಸೀಲ್ದಾರರು
-------ತಾಲ್ಲೂಕು
ಕಛೇರಿಯ ಮೊಹರು

ಸೂಚನೆ-1 ಇದರಲ್ಲಿ ಉಪಯೋಗಿಸಲಾದ "ಸಾಮಾನ್ಯ ನಿವಾಸಿ" ಎಂಬ ಪದವು 1950 ರ ಜನತಾ ಪ್ರಾತಿನಿಧ್ಯ ಕಾಯಿದೆಯ 20ನೇ ಅನುಚ್ಛೇಧದಲ್ಲಿನ ಅರ್ಥವನ್ನು ಹೊಂದಿರುತ್ತದೆ.

ಸೂಚನೆ-2 ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು ದಿನಾಂಕ:31-01-1995 ರನ್ವಯ ಮೇಲುಸ್ತರ (Creamy layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

## ನಮೂನೆ-2

## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ --------------------ರವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ ಕುಮಾರಿ-------------- ಜಿಲ್ಲೆ------------ತಾಲ್ಲೂಕು----------------------ಗ್ರಾಮದಲ್ಲಿ ---------------ವಾಸವಾಗಿರುವ ಇವರು ಒಂದನೇ ತರಗತಿಯಿಂದ----------ತರಗತಿಯವರೆಗೆ-----------ಜಿಲ್ಲೆ----------ತಾಲ್ಲೂಕು ----ಪಟ್ಟಣ ಶಾಲೆಯಲ್ಲಿ ವ್ಯಾಸಂಗ ಮಾಡಿ-----------ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯ ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರನಿಗಮಗಳು ಅಧಿನಿಯಮ, 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಅಡಯಲ್ಲಿ ನಿರ್ದಿಷ್ಟ ಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಹೊರತಾದ ಪ್ರದೇಶದಲ್ಲಿತ್ತು.

(ಸಹಿ)
ಮುಖ್ಯೋಪಾಧ್ಯಾಯರು

ಮೇಲುರುಜು
ಕ್ಷೇತ್ರ ಶಿಕ್ಷಣ ಅಧಕಾರಿ

---

## ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ

ಶ್ರೀ/ಶ್ರೀಮತಿ---------------------ರವರ ಮಗ/ಮಗಳು/ಪತ್ನಿ ಶ್ರೀ/ಶ್ರೀಮತಿ /ಕುಮಾರಿ ----------------ಜಿಲ್ಲೆ------------ತಾಲ್ಲೂಕು---------------ಗ್ರಾಮದಲ್ಲಿ -------------ವಾಸವಾಗಿರುವ ಇವರು ------------- ತರಗತಿಯಿಂದ------------ತರಗತಿಯವರೆಗೆ----------------ಶೈಕ್ಷಣಿಕ ವರ್ಷದಿಂದ -------------ಶೈಕ್ಷಣಿಕ ವರ್ಷದವರೆಗೆ --------------ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದೂ ಪ್ರಮಾಣೀಕರಿಸಲಾಗಿದೆ.

ದಿನಾಂಕ:-------------- ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು
ಸ್ಥಳ:-----------

ಸೂಚನೆ:ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಶಾಲಾವಾರು ಪ್ರತ್ಯೇಕ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಸಲ್ಲಿಸಬೇಕು.

## ANNEXURE – A

## ELIGIBILITY CERTIFICATE

[Under Article 371 (J)]
(see rule e(3))

[The Karnataka Public employment (Reservation in Appointment for Hyderabad-Karnataka Region) Rules for Issual of Certificates, 2013.]

Sri / Smt ...................................................... S/o / W/o ...................................................... is a Local Person of the Village / Town .............................................................. Of Taluka ...................................................... Of District of Karnataka State.

Place: ................................

Date: .................................

Name: ..............................................

Assistant Commissioner

.................................... Sub Division

.................................... District

>>>>>>***<<<<<<